# ‘ಅ’ಕಾರ ‘ಹ’ಕಾರ ಕಥೆ

ಕನ್ನಡ ಕಲರ್ಸ್‌ನ ‘ಕನ್ನಡತಿ’ ಆರಂಭಿಕ ದಿನಗಳಲ್ಲಿ ವಿನೂತನ ಮಾದರಿ ಎಂದು ಪ್ರೇಕ್ಷಕರಿಗೆ ಅನಿಸಿತ್ತು. ಕನ್ನಡ ಭಾಷೆಯ ಸುಧಾರಣೆ ಮತ್ತು ವಿಶ್ಲೇಷಣೆಯನ್ನು ತರ್ಕಬದ್ಧವಾಗಿ ಮಾಡುತ್ತದೆ ಎಂದೇ ಅನಿಸಿತ್ತು. ಇದೇ ಕುತೂಹಲದಿಂದ ಎಷ್ಟೋ ಜನ ತಪ್ಪದೇ ವೀಕ್ಷಿಸುತ್ತಿದ್ದರು. ಆದರೆ ಬರುಬರುತ್ತ ಈ ಧಾರಾವಾಹಿಯಲ್ಲಿ ಅನಗತ್ಯ ದೃಶ್ಯಗಳು, ಸುತ್ತೀ ಬಳಸಿ ಅನೇಕ ಹಳಸಲು ಸಂಭಾಷಣೆ, ಅಗತ್ಯಕ್ಕಿಂತ ಮೇಕಪ್ ಮಾಡಿ ಇತರೆ ಸಾಮಾನ್ಯ ಧಾರಾವಾಹಿಗಳ ಸಾಲಿಗೆ ಸೇರ್ಪಡೆ ಆಯಿತು.

ಈ ಧಾರಾವಾಹಿಯಲ್ಲಿ ಕಾಣಿಸಿಕೊಳ್ಳುವ ‘ಪೂರ್ವಿ’ಗೆ ‘ಅ’ಕಾರ ‘ಹ’ಕಾರಗಳ ವ್ಯತ್ಯಾಸವೇ ಗೊತ್ತಿಲ್ಲ. ಇದನ್ನು ಕೇಳಲೂ ಅಸಹನೀಯ ಎದೆನಿಸುತ್ತದೆ. ಇಂತಹ ಸೂಕ್ಷ್ಮ ವಿಚಾರಗಳನ್ನು ನಿರ್ದೇಶಕರು ಗಮನಿಸದಿರುವುದು ವಿಷಾದನೀಯ. ಇನ್ನು ಮುಂದಾದರೂ ಇಂತಹ ತಪ್ಪುಗಳಿಗೆ ಅವಕಾಶ ಮಾಡಿ ಕೊಡಲಾರರು ಎಂದು ಆಶಿಸೋಣವೇ?

—ಅರವಿಂದ ಜಿ.ಜೋಷಿ, ಮೈಸೂರು

# ಮಾದರಿ ಸಂದರ್ಶನ

ಚಂದನದಲ್ಲಿ ‘ಅರುಂಧತಿನಾಗ್’ ಅವರ ಸಂದರ್ಶನ ತುಂಬಾ ಚೆನ್ನಾಗಿ ಮೂಡಿ ಬಂತು. ಅವರ ಮತ್ತು ಶಂಕರನಾಗ್ ಅವರ ಕನಸಿನ ‘ರಂಗಶಂಕರ’ ಕಟ್ಟಲು ಪಟ್ಟ ಕಷ್ಟ, ಈಗ ಅದನ್ನು ಮುಂದುವರಿಸಿಕೊಂಡು ಹೋಗುವಲ್ಲಿ ಅವರಿಗೆ ಇರುವ ಕಾಳಜಿಯನ್ನು ಸ್ಪಷ್ಟವಾಗಿ ಹೇಳಿದರು. ಹವ್ಯಾಸಿ ರಂಗಭೂಮಿ, ಸಿನಿಮಾರಂಗ, ಮಕ್ಕಳ ರಂಗಭೂಮಿ ಬಗ್ಗೆ ಅವರು ಚೆನ್ನಾಗಿ ವಿವರಿಸಿದರು. ಅರುಂಧತಿಯವರ ಎಲ್ಲಾ ಕನಸುಗಳು ನನಸಾಗಲಿ. ಈ ಮೂಲಕ ಅವರಿಗೆ ಶುಭ ಹಾರೈಕೆಗಳು.

—ಕಮಲಾದೇವಿ ರಾಜಶೇಖರ್ ಹಳ್ಳೂರ್, ಬೆಂಗಳೂರು

# ವಿಜಯ್‌ಗೆ ನಮನ

ಸ್ಟಾರ್ ಸುವರ್ಣದಲ್ಲಿ ಸಂಚಾರಿ ವಿಜಯ್ ಅಭಿನಯದ ‘ನಾನು ಅವನಲ್ಲ ಅವಳು’ ಪ್ರಸಾರವಾಯಿತು. ವಿಜಯ್ ಅವರ ಅಭಿನಯವನ್ನು ನೋಡಿ ಎಂತಹ ಒಳ್ಳೆಯ ನಟನನ್ನು ಚಿತ್ರರಂಗ ಕಳೆದು ಕೊಂಡಿತಲ್ಲ ಎಂದು ಬಹಳ ಬೇಸರವಾಯಿತು.

ಮಂಗಳ ಮುಖಿಯರ ಜೀವನ ಹಾಗೂ ಅವರ ಕಷ್ಟಗಳನ್ನು ನೋಡಿ ವೇದನೆ ಆಯಿತು. ನಮ್ಮ ಕನ್ನಡ ಚಿತ್ರಕ್ಕೆ ರಾಷ್ಟ್ರ ಪ್ರಶಸ್ತಿ ತಂದು ಕೊಟ್ಟ ನಟನಿಗೆ ನಮನಗಳು.

—ಕೆ.ಎಸ್. ಸವಿತ, ಬೆಂಗಳೂರು

ವಾರದ ಪತ್ರ

# ನಿಯಂತ್ರಣ ಬೇಡ

ಝೀ ಕನ್ನಡದ ‘ಜೊತೆ ಜೊತೆಯಲಿ’ ಸಂಚಿಕೆಯಲ್ಲಿ ಅತ್ತೆ ಶಾರದಾದೇವಿ, ಸೊಸೆ ಮಾನ್ಸಿಗೆ ಆರ್ಯ ಮತ್ತು ಅನು ನಿಶ್ಚಿತಾರ್ಥಕ್ಕೆ ನೀನು ಆಡಂಬರವಾಗಿ ರೆಡಿ ಆಗುವುದು ಬೇಡ ಎಂದು ಹೇಳಿ ಕೊನೆಗೆ ಅತ್ತೆಯೇ ಆಡಂಬರದಿಂದ ತಯಾರಿ ಆಗುವುದನ್ನು ನೋಡುತ್ತೇವೆ. ಇದು ಕೇವಲ ಒಂದು ಸಂಚಿಕೆಯ ಉದಾಹರಣೆ. ಹೀಗೆ ಹಲವು ಬಾರಿ ಮಾನ್ಸಿ ನಿಲುವುಗಳಿಗೆ ವಿರುದ್ಧವಾಗಿ ಅತ್ತೆ ಶಾರದಾದೇವಿ ನಡೆದುಕೊಳ್ಳುವುದನ್ನು ಬಹಳ ಸಂಚಿಕೆಯಲ್ಲಿ ನೋಡಿರುತ್ತೇವೆ.

ಅತ್ತೆ ತಾನು ಹಿರಿಯಳು ಎನ್ನುವ ಕಾರಣಕ್ಕೆ ಏನಾದರೂ ಹೇಳಬಹುದು. ತನ್ನ ಹಳೆಯ ಅನುಭವವನ್ನು ಸೊಸೆಯ ಮೇಲೆ ಹೇರಬಹುದು ಎನ್ನುವುದೇ ತಪ್ಪು. ವಯಸ್ಸು ಅಥವಾ ಅನುಭವವನ್ನೇ ಮನಸ್ಸಿನಲ್ಲಿಟ್ಟುಕೊಂಡು ಅಭಿಪ್ರಾಯ ಹೇರಬಾರದು. ಸೊಸೆಗೆ ಅವಳದ್ದೇ ಆದ ಬದುಕು ಇದೆ. ವ್ಯಕ್ತಿತ್ವ, ಅಭಿಪ್ರಾಯಗಳಿವೆ. ಅಡುಗೆಯಿಂದ ಹಿಡಿದು ಧರಿಸುವ ಬಟ್ಟೆಯವರೆಗೂ ಅವರವರ ಅಭಿರುಚಿ, ಅಭಿಪ್ರಾಯಗಳನ್ನು ಗೌರವಿಸಬೇಕು ಟೀಕಿಸುವ, ವಿರೋಧಿಸುವ ನಿಯಂತ್ರಿಸುವ ಮನೋಭಾವ ಬೇಡ.

—ಸರಿತ ಮಹೇಶ್, ಮೂಡುವಳ್ಳಿ

# ಇದು ಕನ್ನಡ ಪ್ರೇಮವೇ

ಸ್ಟಾರ್ ಸುವರ್ಣದಲ್ಲಿ ಮಹಿಳೆಯರಿಗೆಂದೇ ‘ಸೂಪರ್ ಸ್ಟಾರ್’ ಪ್ರಸಾರವಾಗುತ್ತಿದೆ. ಅದರಲ್ಲಿ ‘ನುಡಿಕನ್ನಡ’ ಎನ್ನುವ ಒಂದು ಸುತ್ತು ಇದೆ. ಆ ಸುತ್ತಿನಲ್ಲಿ ಕೊಟ್ಟ ವಿಷಯಕ್ಕೆ ಪೂರಕವಾಗಿ, ಅಚ್ಚ ಕನ್ನಡದಲ್ಲಿ ಮಾತನಾಡುವ ಸ್ಪರ್ಧಿಗೆ ಮೊದಲ ಬಹುಮಾನ ದೊರೆಯುತ್ತದೆ. ಇಲ್ಲಿ ಗಮನಾರ್ಹ ಸಂಗತಿಯೆಂದರೆ ಕನ್ನಡ ಭಾಷೆಗೆ ಒತ್ತು ಕೊಡುವ ಚಾನಲ್ ನವರು ಸ್ಪರ್ಧೆಯಲ್ಲೂ ಇಂಗ್ಲಿಷ್‌ನಲ್ಲಿ ಹೆಸರನ್ನು ಇಟ್ಟಿರುವುದು ವಿಪರ್ಯಾಸ. ಕಾರ್ಯಕ್ರಮದ ಶೀರ್ಷಿಕೆಯೇ ‘ಸೂಪರ್ ಸ್ಟಾರ್’. ಉಳಿದ ವಿಭಾಗಗಳು ‘ಕ್ರೇಜಿ ಕುರುಕ್ಷೇತ್ರ’, ‘ಫಿಲ್ಮೀ ರೌಂಡ್’, ‘ಸೂಪರ್ ಖಿಲಾಡೀಸ್’, ‘ಮಾರ್ಕೆಟ್ ಲೂಟಿ’.... ಹೀಗೆ ಅನೇಕ ಹೆಸರನ್ನು ಇಡಲಾಗಿದೆ. ಇವರಿಗೆ ಅಚ್ಚ ಕನ್ನಡದ ಪರ್ಯಾಯ ಪದಗಳು ದಕ್ಕದೇ ಇರುವುದು ವಿಷಾದದ ಸಂಗತಿ ಎಂದೆನಿಸುತ್ತದೆ. ಇನ್ನು ಸ್ಪರ್ಧಿಗಳು ಮಾತನಾಡುವ ಕನ್ನಡವಂತೂ ಕರ್ಣ ಕಠೋರ.

—ಎನ್. ಕೃಷ್ಣಮೂರ್ತಿ ರಾವ್

# ಬದುಕು ಬದಲಿಸುವ ಕತೆಗಳು

ಇವು ಪಾಪದ ಕತೆಗಳು. ಆದರೆ ಪಾಠ ಕಲಿಸೋ ಕತೆಗಳು ‘ಶಾಂತಂ ಪಾಪಂ’ನಲ್ಲಿ ಪ್ರಸಾರವಾಗುತ್ತಿದೆ. ಇವು ವೀಕ್ಷಕರಿಗೆ ಕೆಟ್ಟ ಸಂದೇಶವನ್ನು ರವಾನಿಸುತ್ತಿವೆ ಎಂಬ ಅಭಿಪ್ರಾಯವನ್ನು ಇದೇ ಅಂಕಣದಲ್ಲಿ ಓದಿದ್ದೆ. ಆದರೆ ಕೌಟುಂಬಿಕ ಕಥೆಗಳು ಎಂಬ ಹಣೆಪಟ್ಟಿ ಹೊತ್ತ ಧಾರಾವಾಹಿಗಳು ಮನೆಮಂದಿ ಎಲ್ಲ ಒಟ್ಟಿಗೆ ಕುಳಿತು ನೋಡುವಂತೆ ಇರುವುದಿಲ್ಲ. ಕೊಲ್ಲಲು ಸುಪಾರಿ ಕೊಡುವುದು, ವೆಂಟಿಲೇಟರ್ ಕಳಚುವುದು, ಗರ್ಭಪಾತಮಾಡಿಸುವುದು, ವಿಷ ಉಣಿಸುವುದು, ಅಪಹರಣ, ಮೋಸ, ವಂಚನೆಯಿಂದ ಕೂಡಿದ ಕತೆಗಳು ಉತ್ತಮ ಸಂದೇಶವನ್ನು ನೀಡುತ್ತಿವೆಯೇ? ಆದರೆ ‘ಶಾಂತಂ ಪಾಪಂ’ ಕತೆಗಳು ಇಂದಿನ ಪೀಳಿಗೆಯ ಜನಜೀವನದ ಮೇಲೆ ಬೆಳಕನ್ನು ಚೆಲ್ಲಿ, ಅಮಾಯಕರ ಬದುಕನ್ನು ಬದಲಿಸಲು ಸಹಾಯ ಮಾಡುತ್ತಿವೆ.

—ಪುಷ್ಪ ಎನ್.ಕೆ. ರಾವ್

# ಮಾತಿಗೆ ಮಿತಿ ಬೇಕು

ಬಿಗ್‌ಬಾಸ್ ಮತ್ತೆ ಶುರುವಾಗಿದ್ದು ಖುಷಿ ಎನಿಸಿತ್ತು. ಆದರೆ, ಚಕ್ರವರ್ತಿ ಹಾಗೂ ಸಂಪಂಗಿ ನಡುವಿನ ವಾಕ್‌ಸಮರ, ಕೆಳಮಟ್ಟದಲ್ಲಿ ಆಡುತ್ತಿರುವ ಮಾತುಗಳು, ಇದು ಯಾವ ಟಾಸ್ಕೋ ಎಂದು ತಿಳಿಯದು. ‘ಹಲ್ಕಟ್’, ‘ಮುಚ್ಕೊಂಡಿರು’ ಎಂದು ಕೀಳು ದರ್ಜೆಯಲ್ಲಿ ಮಾತನಾಡುತ್ತಾರೆ. ಇದನ್ನು ವಾರಾಂತ್ಯದಲ್ಲಿ ಸುದೀಪ್ ವಿಮರ್ಶಿಸುವ ಬದಲು ಆಯಾಯ ದಿನವೇ ಎಚ್ಚರಿಸುವುದು ಒಳ್ಳೆಯದು. ಅಲ್ಲಿರುವ ಹೆಣ್ಣುಮಕ್ಕಳ ಪೋಷಕರೂ ಗಮನಿಸುತ್ತಾರೆ. ಇಂತಹ ಮಾತುಗಳಿಗೆ ಕಡಿವಾಣ ಅಗತ್ಯವಿದೆ.

—ಅಂಚೆ ಸುಬ್ರಹ್ಮಣ್ಯ

# ವೀಕ್ಷಕರ ದುರ್ದೈವ

ಕಲರ್ಸ್‌ನ ‘ಮಂಗಳ ಗೌರಿ’ಯಲ್ಲಿ ಐದು ತಿಂಗಳ ಗರ್ಭಿಣಿ ಮಂಗಳ ಗೌರಿ ರೌಡಿಗಳನ್ನು ಸದೆ ಬಡಿಯುವುದನ್ನು ನೋಡಿದಾಗ ನಗೆ ಬಾರದವನಿಗೂ ನಗೆ ಉಕ್ಕಿ ಬರುತ್ತದೆ. ಧಾರಾವಾಹಿ ವೀಕ್ಷರನ್ನು ದಡ್ಡ ಶಿಖಾಮಣಿಗಳು, ಅವರು ಏನನ್ನಾದರೂ ಸ್ವೀ ಕರಿಸುತ್ತಾರೆ ಎಂದು ತಿಳಿದಿರುವಂತಿದೆ. ಅಸಮಾನ್ಯವಾದುದನ್ನು ತೋರಿಸಿ ನಗೆಪಾಟಲಿಗೀಡಾಗಬಾರದು. ಮಂಗಳ ಗೌರಿಯು ರೌಡಿಗಳನ್ನು ಮಟ್ಟ ಹಾಕುವುದು ಒಂದು ಜೋಕಾಗಿ ಅಪಹಾಸ್ಯಕ್ಕೀಡಾಗಿದೆ. ಕನ್ನಡ ಧಾರಾವಾಹಿಗಳ ಮಟ್ಟ ಈ ರೀತಿ ತಳ ಹಿಡಿದಿರುವುದು ಕನ್ನಡ ವೀಕ್ಷಕರ ದುರ್ದೈವ ಎನ್ನಬಹುದೇನೋ?

—ರಮಾನಂದ ಶರ್ಮಾ, ಬೆಂಗಳೂರು